<u>ದಿನಾಂಕ :04-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ ಬಿ.ಎಲ್.ಡಬ್ಲೂ. ವಕೀಲರಿಂದ:</u>

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಪಿ-6- ಡಿಸಚಾರ್ಜ ಕಾರ್ಡ

ನಿಪಿ-7- ಡೆತ್ ಸಮರಿ

ನಿಪಿ-8- ಔಷಧಿ ಬಿಲ್ಲಗಳು (35) ಒಟ್ಟು ಮೊತ್ತ ರೂ. 1,82,881/-( ತಕರಾರಿಗೆ ಒಳಪಟ್ಟು )

ಪಡಿತರ ಚೀಟಿಯ ಜರಾಕ್ಸ ಪ್ರತಿ ಹಾಜರು ಪಡಿಸಿರುತ್ತಾರೆ.

ಪಾಟಿ ಸವಾಲು: ಶ್ರೀ. ಎನ್. ಆರ್. ಎಸ್. ವಕೀಲರಿಂದ:

ಮೃತ ಸುಭಾಷ ನನ್ನ ಗಂಡ ಆಗಬೇಕು.ನನ್ನ ಯಜಮಾನರಿಗೆ ಅಪಘಾತ ಅಗಿ ಮೂರು ವರ್ಷ ಆಯಿತು. ನನ್ನ ಯಜಮಾನರಿಗೆ ಬಲರಾಮ ಚೌಕ ಹತ್ತಿರ ಹೋಗುತ್ತಿದ್ದಾಗ ವಾಹನ ಬಂದು ಅಪಘಾತ ಮಾಡಿರುತ್ತದೆ ವಾಹನ ಯಾವುದು ಮತ್ತು ಅದರ ನಂಬರ ಹೇಳಲು ಆಗುವುದಿಲ್ಲಾ. ನನ್ನ ಯಜಮಾನರನ್ನು ಗುಲಬರ್ಗ ಆಸ್ಪತ್ರೆಗೆ ಸೇರಿಸಿದ್ದರು. ಆಸ್ಪತ್ರೆಯ ಹೆಸರು ನನಗೆ ಹೇಳಲು ಆಗುವುದಿಲ್ಲಾ. ಆಸ್ಪತ್ರೆಯಲ್ಲಿ ಸಮಾರು 3 ತಿಂಗಳು ಚಿಕಿತ್ಸೆ ಪಡೆದಿರುತ್ತಾರೆ. ನನ್ನ ಪರಮಾಣ ಪತ್ರದಲ್ಲಿ ದಿನಾಂಕ 17-11-2018 ರಿಂದ 30-11-2018 ರವರೆಗೆ ಆಸ್ಪತ್ರೆಯಲ್ಲಿದ್ದರು ಎಂದು ಹೇಳಿದ್ದು ಸರಿ ಎಂದು ಹೇಳುತ್ತಾರೆ. ಆಸ್ಪತ್ರೆಯಿಂದ ಗುಣಮುಖರಾದ ನಂತರ ಬಿಡುಗಡೆ ಮಾಡಿದ್ದರು ಎಂದು ಸೂಚಿಸುವುದು ಸರಿ.

ನನ್ನ ಯಜಮಾನರು ಡ್ರೈವರ ಕೆಲಸ ಮಾಡುತ್ತಿದ್ದರು. ಆಸ್ಪತ್ರೆಯಿಂದ ಬಿಡುಗಡೆ ಆದ ಮೇಲೆ ಪುನ: ಡ್ರೈವರ ಕೆಲಸಕ್ಕೆ ಹೋಗಿಲ್ಲಾ. ಅವರು ಪುನ: ಕೆಲಸಕ್ಕೆ ಹೋಗಿಲಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಯಜಮಾನರು ತೀರಿಕೊಂಡ ಈಗ ಒಂದು ವರ್ಷ ಆಗಿರುತ್ತದೆ. ಅವರು ಅಪಘಾತದಲ್ಲಿ ಆದ ಗಾಯದಿಂದ ತೀರಿಕೊಂಡಿರುತ್ತಾರೆ ಎಂದು ಪೋಲಿಸರಿಗೆ ನಾವು ಮಾಹಿತಿ ನೀಡಿವುದಿಲ್ಲಾ. ನನ್ನ ಯಜಮಾನರು ತೀರಿಕೊಂಡ ನಂತರ ಮರೋಣತ್ತರ ಪರೀಕ್ಷೆ ಮಾಡಿಲ್ಲ ಎನ್ನುವುದು ಸರಿ. ನಮ್ಮ ಯಜಮಾನರು ಬೇರೆ ಕಾರಣದಿಂದ ಸತ್ತಿದ್ದು ಆದರೆ ಪರಿಹಾರ ಸಿಗಲಿ ಎಂದು ಅಪಘಾತದಿಂದ ಆದ ಗಾಯದಿಂದ ಸತ್ತಿದ್ದಾರೆಂದು ಸುಳ್ಳು ಪ್ರಕರಣ ಹಾಕಿದ್ದೆನೆ

-06-
ಎಮ್ ವಿ ಸಿ ನಂಃ**721/2020**
ಪಿ.ಡಬ್ಲ್ಯೂಃ**1,** ಕಮಲಮ್ಮ

ಅಂದರೆ ಸರಿಯಲ್ಲ. ಅಪಘಾತದ ಆದಾಗ ನನ್ನ ಯಜಮಾನರಿಗೆ 50 ವರ್ಷ ವಯಸ್ಸು ಇತ್ತು.

ಅವರು ಧನಲಕ್ಷ್ಮೀ ಕಛೇರಿಯಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಧನಲಕ್ಷ್ಮೀ ಲಾರಿ ಅವ್ರಿಗೆ ಅಪಘಾತ ಮಾಡಿರುತ್ತದೆ. ನನ್ನ ಯಜಮಾನರು ಸದರಿ ಧನಲಕ್ಷ್ಮಿ ಕಛೇರೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಯಾವುದ ಹಾಕಿಲ್ಲಾ ಅವರಿಗೆ ರೂ. 20 ಸಾವಿರ ಸಂಬಳ ಇತ್ತು ಎಂದು ತೋರಿಸಲು ದಾಖಲೆ ಹಾಕಿಲ್ಲಾ. ಈಗಿನ ಸಮಯದಲ್ಲಿ ಯಾವುದೇ ಆಸ್ಪತ್ರೆಯವರು ಬಿಲ್ಲು ಹಾಗೂ ರಶಿದಿಗಳನ್ನು ಕಂಪ್ಯೂಟರನ ಪ್ರತಿಯಲ್ಲಿ ನೀಡುತ್ತಾರೆ ಎಂದರೆ ಸರಿ ಎಂದು ಹೇಳುತ್ತಾರೆ. ನಾನು ಹಾಕಿರುವ ಎಲ್ಲಾ ಬಿಲ್ಲುಗಳು ಕೈಬರಹದಲ್ಲಿದೆ ಎಂದರೆ ಸರಿ. ನಾನು ಹಾಕಿರುವ ಔಷಧಿ ಬಲ್ಲುಗಳಲ್ಲಿ ಕ್ರಮ ಸಂಖ್ಯೆ 3 ರಲ್ಲಿ ಇರುವ 6 ಬಿಲ್ಲುಗಳು ಸಿರಿಯಲ್ ನಂಬರ 98, 99,100,95,96,97 ಎಂದು ಇದೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಅದೇ ರೀತಿ ಟಿಪ್ಪು ಸುಲ್ತಾನ ಆಸ್ಪತ್ರೆಯ ಬಿಲ್ಲುಗಳ ಸಹ ಕೈ ಬರಹದಲ್ಲಿ ಇದ್ದು ಅವುಗಳನ್ನು ಸೃಷ್ಟಿಸಿ ಹಾಕಿದ್ದೇನೆ ಅಂದರೆ ಸರಿಯಲ್ಲ. ಅದೇರೀತಿ ಎಲ್ಲಾ ಬಿಲ್ಲುಗಳಿಗೆ ಕ್ರಮ ಸಂಖ್ಯೆ ಯಲ್ಲಿ ಗಮನಿಸಿದಾಗ ಇದು ಎಲ್ಲಾ ಬೋಗಸ ಬಿಲ್ಲುಗಳು ಎಂದು ಸೂಚಿಸುವುದು ಸರಿಯಲ್ಲ. ಹೆಚ್ಚಿನ ಮೊತ್ತ ಪಡೆಯಲು ಈ ಬಿಲ್ಲುಗಳನ್ನು ಸೃಷ್ಟಿಸಿ ಹಾಕಿದ್ದೆನೆ ಅಂದರೆ ಸರಿಯಲ್ಲ. ನಾನು ಹಾಕಿರುವ ಔಷಧಿ ಬಿಲ್ಲುಗಳಲ್ಲಿರುವ ಮೊತ್ತಕ್ಕೆ ಯಾವುದೇ ಆಧಾರ ಇಲ್ಲಾ ಎಂದು ಸುಚಿಸುವುದ ಸರಿಯಲ್ಲ. ಕ್ರಮ ಸಂಖ್ಯೆ 20, 21 ರಲ್ಲಿ ಮಾತ್ರ ಕಂಪ್ಯೂಟರ ಬಿಲ್ಲು ಇದೆ ಎನ್ನುವುದು ಸರಿ. ನನ್ನ ಯಜಮಾನರು ಬೇರೆ ಯಾವುದೇ ಕಾರಣದಿಂದ ಸತ್ತಿದ್ದರೂ ಸಹ ಬಿಲ್ಲಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತತ್ತೇನೆಂದರೆ ನನ್ನ ಯಜಮಾನರ ಸಾವಿಗೂ ಮತ್ತು ಅವರಿಗೆ ಉಂಟಾದ ಗಾಯಗಳಿಗೆ ಸಂಬಂಧ ಇಲ್ಲಾ ಎನ್ನುವುದು ಸರಿಯಲ್ಲ. ಆದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಎನ್ನವುದು ಸರಿಯಲ್ಲ.

ಮರು ವಿಚಾರಣೆ:ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.